ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು ಅಂಗೀಕರಿಸಿದ ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು

3 ಚುನಾವಣಾ ಪ್ರಸ್ತಾವ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ "ದಿನಾಂಕ 14ನೇ ಜೂನ್ 2004ರಂದು ಕರ್ನಾಟಕ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಹಾಗೂ ಅನಾಧಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು ಚುನಾವಣಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ ಈ ಕುರಿತು ವಿವಿಧ ಪಕ್ಷಗಳ ಸಚೇತಕರುಗಳು ನೀಡಿರುವ ಒಡಂಬಡಿಕೆ ಪಟ್ಟಿಯ ರೀತ್ಯಾ ಮಾನ್ಯ ವಿಧಾನಸಭೆ ಸದಸ್ಯರುಗಳನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ಅನಾಧಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಮಾನ್ಯ ಸದಸ್ಯರನ್ನು ನೇಮಿಸಲು ಮಾನು ವಿಧಾನ ಸಭಾಧ್ಯಕ್ಷರಿಗೆ ಅಧಿಕಾರವನ್ನು ಈ ಸದನವು ನೀಡುತ್ತದೆ"

ಅಧ್ಯಕ್ಷರು ಪ್ರಸ್ತಾವ ಏನೆಂದರೆ, " ದಿನಾಂಕ 14ನೇ ಜೂನ್ 2004ರಂದು ಕರ್ನಾಟಕ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಹಾಗೂ ಅನಾಧಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು ಚುನಾವಣಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ ಈ ಕುರಿತು ವಿವಿಧ ಪಕ್ಷಗಳ ಸಚೇತಕರುಗಳು ನೀಡಿರುವ ಒಡಂಬಡಿಕೆ ಪಟ್ಟಿಯ ರೀತ್ಯಾ ಮಾನ್ಯ ವಿಧಾನಸಭೆ ಸದಸ್ಯರುಗಳನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ಅನಾಧಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಮಾನ್ಯ ಸದಸ್ಯರನ್ನು ನೇಮಿಸಲು ಮಾನ್ಯ ವಿಧಾನ ಸಭಾಧ್ಯಕ್ಷರಿಗೆ ಅಧಿಕಾರವನ್ನು ಈ ಸದನವು ನೀಡುತ್ತದೆ",

(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು)

4 ಸಚಿವರ ಹೇಳಿಕೆ

ಜೂನ್ 2004 ರಿಂದ ಆಗಸ್ಟ್–2004 ರ ಮುಂಗಾರಿನ ಅವಧಿಯಲ್ಲಿ ವಿದ್ಯುತ್ ಬಳಕೆಯನ್ನು ಹೆಚ್ಚುಸುವುದರ ಬಗ್ಗ ಲೋಕೋಪಯೋಗಿ ಹಾಗೂ ವಿದ್ಯುತ್ ಸಚಿವರ ಹೇಳಿಕೆ

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) ಮಾನ್ಯ ಅಧ್ಯಕ್ಷರೆ, 2004ರ ಮಾರ್ಚ್ ತಿಂಗಳಿನಲ್ಲಿ ರಾಜ್ಯದ ವಿದ್ಯುತ್ ಬೇಡಿಕೆಯ ಶೃಂಗಕ್ಕೇರಿ 100 ದಶಲಕ್ಷಯೂನಿಟ್ಟುಗಳಿಗೆ (ದ ಲ ಯೂ) ಏರಿತು. ತರುವಾಯ ಈ ಬೇಡಿಕೆಯ 92 ದ ಲ ಯೂ ಗಳಿಗೆ ಇಳಿಯಿತು ಮೇ ತಿಂಗಳಿನಲ್ಲಿ ಒಳ್ಳೆಯ ಮಳೆಯಾಯಿತು ಮತ್ತು ಇದು ಈ ತಿಂಗಳಿನಲ್ಲಿಯೂ ಮುಂದುವರೆದಿದೆ ವಿದ್ಯುತ್

ಜಾಲದ ದಿನಂ ಪ್ರತಿ ಬೇಡಿಕೆಯು 58 ದ ಲ ಯೂ ಗಳಿಗೆ ಇಳಿದಿದ್ದು ಮತ್ತು ಇದು ಈಗ 65 ರಿಂದ 70 ದ ಲ ಯೂ ಗಳ ಮಟ್ಟದಲ್ಲಿದೆ ಈಗ ಹೆಚ್ಚು ದರವನ್ನು ನೀಡಬೇಕಾಗಿರುವ ಖಾಸಗೀ ವಿದ್ಯುತ್ ಉತ್ಪಾದಕರಿಗೆ, ರಾಯಚೂರು ಶಾಖೋತ್ಪನ್ನ ವಿದ್ಯುತ್ ಉತ್ಪಾದನ ಕೇಂದ್ರದ ಎರಡು ಘಟಕಗಳಿಗೆ ಮತ್ತು ಹಲವು ಕೇಂದ್ರ ವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಸೇರಿ, ಜಾಲಕ್ಕೆ ವಿದ್ಯುತ್ತನ್ನು ರವಾನಿಸದಿರಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು (ಕವಿಪ್ರನಿನಿ) ನಿರ್ದೇಶನವನ್ನು ನೀಡಿದೆ ಅದಾಗ್ಯೂ ರಾತ್ರಿ ವೇಳೆಯಲ್ಲಿ ವಿದ್ಯುತ್ ಭಾರವು ಇಳಿಮುಖವಾಗುವುದರಿಂದ ಜಾಲದ ತರಂಗವು ಏರಿ ವೋಲ್ಟೇಜ್ ಜಾಸ್ತಿಯಾಗುವು ಕಾರಣ ನಿಗಮದ ವಿದ್ಯುತ್ ರವಾನೆ ಕೇಂದ್ರವು ಸಮಸ್ಯೆಗಳನ್ನು ಎದುರಿಸುತ್ತಿದೆ ಜಾಲದ ತರಂಗವು 50 5 ಹೆಚ್ ಜಡ್‌ಗಿಂತ ಜಾಸ್ತಿಯಾದಾಗ ಸರಬರಾಜು ಮಾಡಲಾದ ವಿದ್ಯುತ್ತಿಗೆ ಹಣವು ಬರುವುದಿಲ್ಲ ವೋಲ್ಟೇಚ್ ಹೆಚ್ಚಾದಾಗ ಇದು ಉತ್ಪಾದನಾ ಸ್ಥಿರತೆಗೆ ಧಕ್ಕೆ ಉಂಟುಮಾಡುತ್ತದೆ ಮತ್ತು ಪ್ರಸರಣಾ ಸಾಮಗ್ರಿಗಳಿಗೂ ಹಾನಿಯಾಗುತ್ತದೆ ಕವಿಪ್ರನಿನಿಯು ಅಸಂಪ್ರದಾಯಕ ಇಂಧನ ಮೂಲ ವಿದ್ಯುತ್ ಉತ್ಪಾದನಾ ಕೇಂದ್ರಗಳು ರಾತ್ರಿ ವೇಳೆ ಅಂದರೆ ರಾತ್ರಿ 11 00 ರಿಂದ ಬೆಳಗ್ಗೆ 7 00 ಗಂಟೆಯವರಿಗೆ ಉತ್ಪಾದಿಸದಿರುವಂತೆ ನಿಬಂಧನೆಯನ್ನು ಹಾಕಲು ಪ್ರಯತ್ನಿಸಿತು ಆದರೆ ಇದಕ್ಕೆ ಅಸಂಪ್ರದಾಯಿಕ ವಿದ್ಯುತ್ ಉತ್ಪಾದನಾ ಕೇಂದ್ರಗಳ ಅಭಿವೃದ್ದಿಗಾರರಿಂದ ತೀವ್ರ ವಿರೋಧ ವ್ಯಕ್ತವಾಯಿತು ಅವರ ಪ್ರಕಾರ ಕಿರುಜಲವಿದ್ಯುತ್ ಉತ್ಪಾದನಾ ಕೇಂದ್ರಗಳು ಮತ್ತು ಪವನ ವಿದ್ಯುತ್ ಉತ್ಪಾದನಾ ಕೇಂದ್ರಗಳು ಮುಂಗಾರಿನ ಅವಧಿಯಲ್ಲಿ ಮಾತ್ರ ಹೆಚ್ಚು ವಿದ್ಯುತ್ ಉತ್ಪಾದಿಸಬಹುದು ಮತ್ತು ಇದಕ್ಕೆ ನಿಗಮವು ಕಡಿವಾಣ ಹಾಕಿದಲ್ಲಿ ಅವರ ಆರ್ಥಿಕ ವ್ಯವಸ್ಥೆಗೆ ಅಡ್ಡಿಯಾಗುತ್ತದೆ ಅವರುಗಳ ಈ ಅಭಿಪ್ರಾಯ ಒಪ್ಪಬಹುದಾದ ಅಂಶ

ಕೈಗಾರಿಕಾ ಸಂಯುಕ್ತ ಸಂಘವು (ಜೆ ಎಂ ಸಿ ಐ ಎಫ್ ಕೆ ಸಿ ಸಿ ಐ ಮತ್ತು ಸಿ ಐ ಐ) ಕೆಲ ತಿಂಗಳಿನ ಹಿಂದೆ ಹೆಚ್ ಟಿ ಕೈಗಾರಿಕೆಗಳ ಹೆಚ್ಚುವರಿ ವಿದ್ಯುತ್ ಬಳಕೆಯ ಬಗ್ಗೆ ಒಂದು ಪ್ರಸ್ತಾವನೆಯನ್ನು ಸಲ್ಲಿಸಿತ್ತು ಇದರ ಪ್ರಕಾರ ಮುಂಗಡ ರೇವಣಿಯನ್ನು ದ್ವಿಮಾಸ (2 MMD) ದಂತೆ ಪಡೆಯುವುದು ಮತ್ತು ಬಿಲ್ಲುಗಳನ್ನು ತಿಂಗಳಿಗೆ ಎರಡು ಸಲ ಅಂದರೆ 15 ದಿವಸಗಳಿಗೆ ಒಮ್ಮೆ ನೀಡುವುದು ಆದರೆ ವಿದ್ಯುತ್ ನಿಯಂತ್ರಣಾ ಆಯೋಗ ಇದಕ್ಕೆ ಅನುಮೋದನೆಯನ್ನು ನೀಡಲಿಲ್ಲ ಆದ್ದರಿಂದ ಕವಿಪ್ರನಿನಿಯು ಈ ದಿಸೆಯಲ್ಲಿ ಮುಂದುವರೆಯಲು ಸಾಧ್ಯವಾಗಲಿಲ್ಲ ಕೈಗಾರಿಕಾ ಸಂಯುಕ್ತ ಸಂಘಗಳು ಅವರ ಪ್ರಸ್ತಾವನೆಯನ್ನು ಒಪ್ಪಿದಲ್ಲಿ ಒಂದು ದಿನಕ್ಕೆ 6 ರಿಂದ 7 ದ ಲ ಯೂ ಹೆಚ್ಚುವರಿ ಬಳಕೆಯ ಬಗ್ಗೆ ಆಶ್ವಾಸನೆಯನ್ನು ನೀಡಿದ್ದರು

ಇಂದಿನ ವಿದ್ಯುತ್ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಕೈಗಾರಿಕಾ ವಲಯದ ವಿದ್ಯುತ್ ಬಳಕೆಯನ್ನು ಈ ಮುಂಗಾರಿನ ಅವಧಿಯಲ್ಲಿ ಹೆಚ್ಚಿಸಲು ಹಲವು ದಿಟ್ಟ ಹೆಜ್ಜೆಗಳನ್ನು ತೆಗೆದುಕೊಳ್ಳಬೇಕು ಎನ್ನುವುದು ದಿಟವಾಗುತ್ತದೆ ಇದರಿಂದ

ವಿದ್ಯುತ್ ಸರಬರಾಜು ಕಂಪನಿಗಳು ಹೆಚ್ಚು ಹಣವನ್ನು ಪಡೆಯಲು ಸಹಾಯವಾಗುತ್ತದೆ ಮತ್ತು ಅಸಂಪ್ರದಾಯಕ ಇಂಧನ ಮೂಲ ವಿದುತ್ ಉತ್ಪಾದನಾ ಕೇಂದ್ರಗಳು ಅವರಿಗಿರುವ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಅನವು ಮಾಡಿಕೂಟ್ಟಂತಾಗುತ್ತದೆ ಆದ್ದರಿಂದ ಈ ಕೆಳಕಂಡ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ

ಅ) ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ರಾತ್ರಿ 10 00 ರಿಂದ ಬೆಳಗ್ಗೆ 6 00 ಗಂಟೆಯವರೆವಿಗೂ ಉಪಯೋಗಿಸಿದ ವಿದ್ಯುತ್ತಿಗೆ ಹೆಚ್ ಟಿ ಗ್ರಾಹಕರಿಗೆ ಅನ್ವಯವಾಗುವ ದರದ ಮೇಲೆ ಶೇ 10 00 ರಿಯಾಯಿತಿಯನ್ನು ನೀಡುವುದು (ಹೆಚ್ ಟಿ ಗ್ರಾಹಕರ ವಿದ್ಯುತ್ ಬಳಕೆಯನ್ನು ಪ್ರೋತ್ಸಾಹಿಸಲು ಈಗಾಗಲೇ ಒಂದು ಯೂನಿಟ್ಟಿಗೆ ರೂ 3 80 ರಂತೆ ಸರಬರಾಜು ಮಾಡುವ ವ್ಯವಸ್ಥೆ ಜಾರಿಯಲ್ಲಿದೆ ಈಗ ಪ್ರಸ್ತಾಪಿಸಿರುವ ರಿಯಾಯಿತಿಯು ಈ ವ್ಯವಸ್ಥೆಗೂ ರಾತ್ರಿ ವೇಳೆಯಲ್ಲಿ ಉಪಯೋಗಿಸುವ ವಿದ್ಯುತ್ತಿಗೆ ಅನ್ವಯವಾಗಬೇಕು)

ಆ) ವಿದ್ಯುತ್ ಸರಬರಾಜು ಕಂಪನಿಗಳು ಹೆಚ್ ಟಿ ಗ್ರಾಹಕರಿಂದ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳುಗಳ ಅವಧಿಯಲ್ಲಿ ಉಪಯೋಗಿಸಿದ ಹೆಚ್ಚುವರಿ ವಿದ್ಯುತ್ತಿಗೆ ಹೆಚ್ಚುವರಿ ರೇವಣಿಯನ್ನು ಪಡೆಯದಿರಲು ಸೂಚನೆಯನ್ನು ನೀಡುವುದು

ಇ) ಗ್ರಾಮಾಂತರ ಫೀಡರುಗಳಿಗೆ ರಾತ್ರಿ 10 00 ರಿಂದ ಮರುದಿನ ಸಾಯಂಕಾಲ 6 00 ಗಂಟೆಯವರಿಗೆ ಸತತವಾಗಿ 20 ಗಂಟೆಗಳ ಕಾಳ 3 ಫೇಸ್ ವಿದ್ಯುತ್ ಸರಬರಾಜು ನೀಡುವುದು ಇದರಿಂದ ಗ್ರಾಮಾಂತರ ಕೈಗಾರಿಕೆಗಳು ಹೆಚ್ಚು ವಿದ್ಯುತ್ ಬಳಸಲು ಅನುವಾಗುತ್ತದೆ

ಈ) ಗ್ರಾಮಾಂತರ ಪ್ರದೇಶಗಳಿಗೆ ದಿನಂ ಪ್ರತಿ ರಾತ್ರಿ 6 00 ರಿಂ 10 00 ಗಂಟೆಯವರೆವಿಗೆ 4 ಗಂಟೆ ಒಂದು ಫೇಸ್ ಮತ್ತು ಮಿಕ್ಕ 20 ಗಂಟೆಗಳ ಅವಧಿ 3 ಫೇಸ್ ಸರಬರಾಜು ಮಾಡುವುದು ಹೀಗಾಗಿ ಗ್ರಾಮಾಂತರ ಪ್ರದೇಶಕ್ಕೆ 24 ತಾಸು ವಿದ್ಯುತ್ ಒದಗಿಸಲಾಗುವುದು

ಉ) ಪವನ ವಿದ್ಯುತ್ ಮತ್ತು ಕಿರುಜಲನ ವಿದ್ಯುತ್ ಉತ್ಪಾದನಾ ಕೇಂದ್ರಗಳಿಗೆ ವಿದ್ಯುತ್ ಉತ್ಪಾದನೆಯ ಬಗ್ಗೆ ಯಾವುದೇ ಮಿತಿಯನ್ನು ಹಾಕದಿರುವುದು ಆದರೆ ಸಕ್ಕರೆ ಕಾರ್ಖಾನೆಯ ಸಹ ವಿದ್ಯುತ್ ಉತ್ಪಾದನಾ ಕೇಂದ್ರಗಳು ಮತ್ತು ವ್ಯವಸಾಯ ರದ್ದಿ ಆಧಾರಿತ ಉತ್ಪಾದನಾ ಕೇಂದ್ರಗಳು ರಾತ್ರಿ 11 00 ರಿಂದ ಬೆಳಗ್ಗೆ 5 00 ಗಂಟೆಯವರಿಗೂ ಅವರ ಉತ್ಪಾದನೆಯನ್ನು ಶೇ 60 00 ಕ್ಕೆ ಮಿತಿಗೊಳಿಸುವುದು

ಅಧ್ಯಕ್ಷರು ಸದನದ ಕಾರ್ಯಕಲಾಪಗಳ ಸಲಹಾ ಸಭೆಯಲ್ಲಿ ತೀರ್ಮಾನವಾಗಿರುವಂತೆ ಈ ತಿಂಗಳು 28ನೇ ತಾರೀಖು ಸೋಮವಾರದಂದು ಬೆಳಿಗ್ಗೆ 11 00 ಗಂಟೆಗೆ ಸೇರುವಂತೆ ಈ ಸಭೆಯನ್ನು ಮುಂದೂಡಲಾಗಿದೆ

(ಸದನವು ಮಧ್ಯಾಹ್ನ 12 ಗಂಟೆ 29 ನಿಮಿಷಕ್ಕೆ ಮುಂದೂಡಲ್ಪಟ್ಟುಗೊಂಡು ಪುನಃ ದಿನಾಂಕ 28ನೇ ಜೂನ್ ಮಾಹೆ 2004ರ ಸೋಮವಾರದಂದು ಬೆಳಿಗ್ಗೆ 11 00 ಗಂಟೆಗೆ ಸೇರಲು ನಿಶ್ಚಯಿಸಿತು)

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)